SN – 017

III Sem BCom -36-

III ನೇ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವಂಬರ್/ಡಿಸೆಂಬರ್ 2014
(ಫ್ರೆಷರ್ಸ್ + ರಿಪೀಟರ್ಸ್) (2012-13 & Onwards)
ಕನ್ನಡ ಭಾಷಾ ಪತ್ರಿಕೆ – III
ಸಾಹಿತ್ಯ ಸಲ್ಲಾಪ – ೨ ಮತ್ತು ವ್ಯಾವಹಾರಿಕ ಕನ್ನಡ

Time : 3 Hours Max. Marks : 100

ಭಾಗ – 1

ಸಾಹಿತ್ಯ ಸಲ್ಲಾಪ – ೨

I. ಈ ಪದ್ಯದ ಭಾವಾರ್ಥ ಬರೆಯಿರಿ. (1×5=5)

ಅತ್ತಲಸುರಾರಿ ಬೆಸಸಿದ
ನಿತ್ತಲ್ ರುದ್ರಾವತಾರನೆಳೆದೊಯ್ದಪನಿಂ
ತತ್ತ ಪುಲಿಯಿತ್ತ ದರಿಯೆಂ
ದತ್ತಿತ್ತಡಿಯಿಡದೆ ಲಕ್ಷ್ಮಿ ತಳವೆಳಗಾದಳ್.

II. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ. (3×5=15)

1) ಅಶ್ವತ್ಥಾಮನು ಲಕ್ಷ್ಮಿಯನ್ನು ಮೂದಲಿಸಿದ ಬಗೆ ಹೇಗೆ ?
2) 'ಇಬ್ಬರು ರೈತರು' ಕವನದಲ್ಲಿ ಪ್ರಕೃತಿ ವರ್ಣನೆಗೊಂಡಿರುವ ಬಗೆಯನ್ನು ತಿಳಿಸಿ.
3) ಬಿಜ್ಜಳ–ಬಸವಣ್ಣನವರ ಸಂಭಾಷಣೆಯನ್ನು ಕುರಿತು ಬರೆಯಿರಿ.
4) ಶಿವಣ್ಣನ ಮನೆಯಿಂದ ಕೆಂಚ ತಿಪ್ಪನನ್ನು ಕರೆದೊಯ್ಯಲು ಕಾರಣವೇನು ?
5) ಸಂಸ್ಕೃತಿಯನ್ನು ಕುರಿತು ಕಾರಂತರ ಅಭಿಪ್ರಾಯಗಳಾವುವು ?

III. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (3×12=36)

1) 'ನಿನ್ನಿಂ ನಿಕೃಷ್ಟರೆಂಬರುಮೊಳರೇ' ಪದ್ಯದ ಸಹಾಯದಿಂದ ದುರ್ಯೋಧನನ ಪಾತ್ರ ಪರಿಚಯಿಸಿ.
2) 'ಇಬ್ಬರು ರೈತರು' ಕವನದ ಆಶಯವನ್ನು ವಿಶ್ಲೇಷಿಸಿ.
3) ಬಸವಣ್ಣನು ಕಲ್ಯಾಣವನ್ನು ತೊರೆಯಲು ಕಾರಣವಾದ ಹಿನ್ನೆಲೆಯನ್ನು ವಿವರಿಸಿ.
4) ಕೆಂಚನ ಮಗ ತಿಪ್ಪ ಶಿಕ್ಷಣದಿಂದ ವಂಚಿತನಾದ ಸಂದರ್ಭವನ್ನು 'ಕಳ್ಳುಬಳ್ಳಿ' ಕತೆಯ ಸಹಾಯದಿಂದ ಸ್ಪಷ್ಟಪಡಿಸಿ.
5) 'ಕೈಹಿಡಿದವರು' ಪ್ರಬಂಧದ ಆಶಯವನ್ನು ಕುರಿತು ಬರೆಯಿರಿ.

P.T.O.

## ಭಾಗ – 2

## ವ್ಯಾವಹಾರಿಕ ಕನ್ನಡ

I. ಮೂರಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ. **(3×5=15)**

1) ಲಿಪಿ ಮತ್ತು ತಂತ್ರಜ್ಞಾನ.
2) ಶೀರ್ಷಿಕೆ.
3) ವಿಚಾರಣಾಪತ್ರ.
4) ಪರಿಪತ್ರ.
5) ವಾಚಕರವಾಣಿ.

II. ಈ ಗದ್ಯ ಭಾಗವನ್ನು ಸಂಕ್ಷಿಪ್ತಗೊಳಿಸಿ ಶೀರ್ಷಿಕೆಯನ್ನು ಬರೆಯಿರಿ. **(1×5=5)**

ಆಗ ಸಂಜೆಯಾಗುತ್ತಾ ಬಂದಿತ್ತು. ಮೋಡವು ದಟ್ಟಣಿಸಿತ್ತು. ತಂಪಿನ ಹವೆ ಬೀಸುತ್ತಿತ್ತು. ಹಾದಿಯ ಉದ್ದವನ್ನು ತುಳಿಯುತ್ತ, ತೇರು ಬಿಟ್ಟು ಮನೆಗೆ ಮರಳುವ ಮಕ್ಕಳಂತೆ, ನಡೆದು ಬಸ್ಸು ನಿಲ್ದಾಣಕ್ಕೆ ಬಂದೆವು. ತಂತಮ್ಮ ಊರಿಗೆ ಮರಳುವ ಯಾತ್ರಿಕರು ಬಸ್ಸಿನಲ್ಲಿ ತುಂಬಿಕೊಂಡಿದ್ದರು. ನಾವೂ ಹೊರಡುವ ತಯಾರಿ ನಡೆಸಿದೆವು. ನಮ್ಮ ಸಾಮಾನುಗಳನ್ನು ಮದ್ರಾಸು ಹೋಟೆಲಿನ ಮೆನನಿನ ಅಂಗಡಿಯಲ್ಲಿ ಇರಿಸಿದೆವು. ಆತ ನಮಗಾಗಿ ಟಿಕೇಟುಗಳನ್ನೂ ಹೇಳಿ ಇರಿಸಿದ್ದ. ನಮ್ಮ ಕೆಲಸವೆಂದರೆ – 'ಕೈಯಲ್ಲಿದ್ದ ಒಂದು ಹಕ್ಕಿಯನ್ನು ಕಾಯ್ದುಕೊಳ್ಳುವುದು'. 'ಪೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಯಲ್ಲಿರುವ ಒಂದು ಹಕ್ಕಿ ಲೇಸೆಂಬ ಇಂಗ್ಲೀಷ್ ಗಾದೆಯ ನೆನಪಾಗದೇ ? ಈ ಚಹಾ ಸೀಮೆಯಲ್ಲಿ, ಕಾಫಿ ಕೊಡುವ ಮೆನನ್ ಇರುವಾಗ ಆ ಅವಕಾಶ ಬಿಡಬಾರದೆಂದೆನಿಸಿತು. ನಾನು ಥಾಲಿಗಟ್ಟಲೆ ಕಾಫಿ ಕುಡಿಯುವವನಾದರೆ, ನನ್ನ ಮಿತ್ರ ಶ್ರೀಪತಿ ಗೆಲನ್‌ಗಟ್ಟಲೆ ಕುಡಿಯಬಲ್ಲವ. ಆದರೆ ಅವನದು ವಿಲಕ್ಷಣ ಅಭ್ಯಾಸ. ತಿನ್ನುವ ಪ್ರತಿ ತುತ್ತಿಗಿಂತ ಮೊದಲು ಒಂದೊಂದು ಬಾಟ್ಲಿ ನೀರನ್ನು ಕುಡಿಯಬೇಕು. ಒಬ್ಬ ಆತ್ಮಹತ್ಯೆ ಮಾಡಿಕೊಳ್ಳಬಹುದಾದಷ್ಟು ಆಳದ ಬಟ್ಟಲಿನಲ್ಲಿ ಎರಡು ಬಟ್ಟಲು ನೀರನ್ನು ತರಿಸಿಕೊಂಡು ಕುಡಿದ. ಅದರ ಮೇಲೆ ಒಂದು ಕಪ್ಪು ಕಾಫಿಯನ್ನು ಸುರುವಿದ. ಅದರ ಎಡೆಯಲ್ಲಿ ಒಂದೊಂದು ಮಸಾಲೆ ದೋಸೆಯೂ ತೇಲಿ ಹೋಯಿತು. ಇನ್ನು ನನಗೆ ಊಟವಿಲ್ಲದಿದ್ದರೂ ಚಿಂತೆಯಿಲ್ಲ' ಎಂದು ಆತ ನುಡಿದಾಗಲೇ ನಾನು ನಕ್ಕೆ. ಆತ ಬಲು ಮಿತಾಹಾರಿ ಎಂಬುದು ನನಗೆ ಗೊತ್ತಿತ್ತು. ಬರಿಯ ಡಜನ್ ಚಪಾತಿ ಅಚ್ಚೇರು ಅನ್ನದಿಂದಲೇ ಅವನಿಗೆ ತೃಪ್ತಿ . ಅಂತು ಮೆನನಿನ ಕೈಮೇಲೆ ಎರಡೂ ಮುಕ್ಕಾಲು ರೂಪಾಯಿ ದಕ್ಷಿಣೆಯನ್ನಿರಿಸಿ , ಅವನಿಗೆ ನಿಜವಾಗಿಯೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿ , 'ನನ್ನಂತಹವರು ಪ್ರತಿಯೊಂದು ಹುರಳುಗಾಡಿನಲ್ಲಿಯೂ ಕಾಣ ಸಿಗಲಿ' ಎಂದು ಹರಸಿ ಆ ಊರನ್ನು ಬಿಟ್ಟೆವು.

III. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2×12=24)**

1) ಕನ್ನಡ ಭಾಷಾ ಬಳಕೆಯಲ್ಲಿರುವ ವ್ಯತ್ಯಾಸಗಳನ್ನು ವಿವರಿಸಿ.
2) 'ವ್ಯವಹಾರ ಪತ್ರ' ಎಂದರೇನು ? ಅದರ ಸ್ವರೂಪವನ್ನು ಮಾದರಿಯೊಂದಿಗೆ ವಿವರಿಸಿ.
3) ನಿಮ್ಮ ಕಾಲೇಜಿನ ಗ್ರಂಥಾಲಯಕ್ಕೆ ಸರ್ಕಾರದಿಂದ ಮಂಜೂರಾತಿಗಿರುವ 50 ಸಾವಿರ ರೂ.ಗಳ ಮೊತ್ತದ ಪಠ್ಯಪುಸ್ತಕಗಳನ್ನು ಖರೀದಿಸಲು ಬೆಂಗಳೂರಿನ ಸ್ವಪ್ನ ಪುಸ್ತಕಾಲಯಕ್ಕೆ ಒಂದು ವಿಚಾರಣಾ ಪತ್ರ ಬರೆಯಿರಿ.
4) ಯಾವುದಾದರೂ ಸಾಮಾಜಿಕ ಸಮಸ್ಯೆಯೊಂದನ್ನು ಕುರಿತು 'ವಾಚಕರವಾಣಿಗೆ ' ಪತ್ರ ಬರೆಯಿರಿ.

---